# ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಕಾಯ್ದೆ, 1989


(ದೌರ್ಜನ್ಯ ತಡೆ ಕಾಯ್ದೆ)

## ದೌರ್ಜನ್ಯ ಎಂದರೇನು?

ದೌರ್ಜನ್ಯ ತಡೆ ಕಾಯ್ದೆಯಲ್ಲಿ , ಎಸ್‌ಸಿ/ಎಸ್‌ಟಿ ಸಮುದಾಯದವರ ಮೇಲೆ ಎಸ್‌ಸಿ/ಎಸ್‌ಟಿ ಸಮುದಾಯದಲ್ಲದವರು ಎಸೆಗೆಬಹುದಾದ ನಿರ್ಧಿಷ್ಟ ಅಪರಾಧಗಳನ್ನು ದೌರ್ಜನ್ಯವೆಂದು ಗುರುತಿಸಿ, ಪಟ್ಟಿ ಮಾಡಲಾಗಿದೆ.



**37** ಜಾತಿ ನಿಂದನೆ, ಸಾಮಾಜಿಕ ಹಾಗು ಆರ್ಥಿಕ ಬಹಿಷ್ಕಾರ, ತಮ್ಮ ಸ್ವತ್ತಿನಿಂದ ಅಕ್ರಮವಾಗಿ ಸ್ವಧೀನವನ್ನು ತಪ್ಪಿಸುವುದು, ಲೈಂಗಿಕ ದೌರ್ಜನ್ಯ, ಕೊಲೆ ಮುಂತಾದ 37 ಅಪಾರಾಧಿಕ ಕೃತ್ಯೆಗಳನ್ನು ಕಾಯ್ದೆಯಲ್ಲಿ ಗುರುತಿಸಲಾಗಿದೆ.



## ದೂರು ಮತ್ತು ಎಫ್.ಐ.ಆರ್

ದೌರ್ಜನ್ಯ ಎಸೆಗಿದಾಗ, ಸಂತ್ರಸ್ತರು ಅಥವ ಕಳಕಳಿಯುಳ್ಳ ನಾಗರಿಕರು ಮೊದಲು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಬೇಕು. ದೂರನ್ನು ಸ್ವೀಕರಿಸದ ನಂತರ, ಪೊಲೀಸರು ತಕ್ಷಣ ಎಫ್.ಐ.ಆರ್ ದಾಖಲಿಸಬೇಕು.

- ದೂರಿನಲ್ಲಿ ಘಟನೆಯ ಬಗ್ಗೆ ಸ್ಪಷ್ಟವಾಗಿ ಹಾಗು ವಿವರವಾಗಿ ಬರೆಯಿರಿ
- ದೂರಲ್ಲಿ ಹಾಗು ಎಫ್.ಐ.ಆರ್ ನಲ್ಲಿ ನಿಮ್ಮ ಸಹಿ ಹಾಕಿ. ನಂತರ ಎಫ್.ಐ.ಆರ್ ಪ್ರತಿಯನ್ನು ಪಡೆದುಕೊಳ್ಳಿ

## ಬಂಧನ ಮತ್ತು ರಕ್ಷಣೆ

ಪೊಲೀಸ್ ಅಧಿಕಾರಿಗಳು ಆರೋಪಿಯನ್ನು ತಕ್ಷಣ ಬಂಧಿಸಬೇಕು. ಕಾಯ್ದೆಯ ಆಡಿಯಲ್ಲಿ ಆರೋಪಿಗೆ ನಿರೀಕ್ಷಿತ ಜಾಮೀನು ನೀಡಬಾರದು. ಮತ್ತು ಸಂತ್ರಸ್ತರಿಗೆ /ಪಿರ್ಯಾದುದಾರಿಗೆ ನೋಟಿಸ್ ನೀಡದೇ ಆರೋಪಿಗಳಿಗೆ ನಿಯಮಿತ ಜಾಮೀನು ಸಹ ನೀಡುವಂತಿಲ್ಲ.



ಪೊಲೀಸರು ದೂರು ದಾರರಿಗೆ ಹಾಗು ಸಾಕ್ಷಿಗಳಿಗೆ ರಕ್ಷಣೆ ನೀಡಬೇಕು. ಘಟನೆಯ ಬಗ್ಗೆ ವಿವರಾವಾದ ವರದಿ ತಯಾರು ಮಾಡಬೇಕು ಹಾಗು ಆ ಪ್ರದೇಶದಲ್ಲಿ ವ್ಯಾಪಕ ಪೊಲೀಸ್ ಗಸ್ತಿಗೆ ಆದೇಶಿಸಬೇಕು.



## ಪರಿಹಾರ ಮತ್ತು ತನಿಖೆ

ಪೊಲೀಸ್ ಅಧಿಕಾರಿಗಳು ಘಟನ ಸ್ಥಳದ ತನಿಖೆ (ಪರಿಶೀಲನೆ) ಮಾಡಿ ಹಾಗೂ ಘಟನೆಗೆ ಸಂಬಂಧಿಸಿದ ಸಾಕ್ಷಿಗಳಿಂದ ಹೇಳಿಕೆ ಪಡೆಯಬೇಕು . ಅಲ್ಲದೆ, ದೌರ್ಜನ್ಯಕ್ಕೆ ಒಳಗಾದವರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಜಿಲ್ಲಾಧಿಕಾರಿ ಹಾಗು ಸಮಾಜ ಕಲ್ಯಾಣ ಇಲಾಖೆ ತಕ್ಷಣದ ಪರಿಹಾರ ನೀಡಲು ವ್ಯವಸ್ಥೆ ಮಾಡಬೇಕು .

ಸಂತ್ರಸ್ತರಿಗೆ / ಅವರ ಕುಟುಂಬದವರಿಗೆ ನಗದು ಅಥವಾ ವಸ್ತು ರೂಪದಲ್ಲಿ ಅಥವ ಅವೆರಡನ್ನು ಕೂಡಲೆ ಪರಿಹಾರವಾಗಿ ಒದಗಿಸಬೇಕು

## ವಿಶೇಷ ನ್ಯಾಯಾಲಯಗಳು

ಈ ಕಾಯ್ದೆಗೆ ಸಂಬಂಧಿಸಿದ ಅಪರಾಧಗಳ ತ್ವರಿತ ವಿಚಾರಣೆಗಾಗಿ, ಸರ್ಕಾರವು ಪ್ರತಿ ಜಿಲ್ಲೆಯಲ್ಲೂ ವಿಶೇಷ ನ್ಯಾಯಾಲಯ ಪ್ರಾರಂಭ ಮಾಡಲೇಬೇಕು.




ಶಿಕ್ಷೆ : ಕನಿಷ್ಠ 6 ತಿಂಗಳ ಜೈಲು ಶಿಕ್ಷೆ ಹಾಗು ಗರಿಷ್ಠ ಜೀವವಾಧಿ ಶಿಕ್ಷೆ/ ಗಲ್ಲು ಶಿಕ್ಷೆ ತನಕ ನೀಡಬಹುದು.

# ದೌರ್ಜನ್ಯ ದೂರಿನಲ್ಲಿರಬೇಕಾದ ಮಾಹಿತಿ

## ಪ್ರಥಮ ವರ್ತಮಾನ ವರದಿ ( ಎಫ್ .ಐ .ಆರ್ )

ಸ್ಥಳೀಯ ಪೊಲೀಸ್  ಠಾಣೆಯಲ್ಲಿ ಸಲ್ಲಿಸಿಲಾದ ದೂರಿನ ಮೇರೆಗೆ ಅಥವ ದೌರ್ಜನ್ಯ ತಡೆ ಕಾಯ್ದೆಯ ಅಡಿಯಲ್ಲಿ ರಚಿಸಲಾದ ವಿಷೇಷ ನ್ಯಾಯಲಯದಲ್ಲಿ ಸಲ್ಲಿಸಲಾದ ಖಾಸಗಿ ದೂರಿನ ಮೇರೆಗೆ ಎಫ್ .ಐ .ಆರ್  ದಾಖಲಿಸಲಾಗುವುದು . ಎಫ್ .ಐ .ಆರ್  ದಾಖಲಿಸಿದ ನಂತರ ಒಂದು ಪ್ರಕರಣದ ತನಿಖೆ ಪ್ರಾರಂಭವಾಗುತ್ತದೆ.



## 1. ಯಾರು?

1. ಮಾಹಿತಿ ನೀಡುವ ವ್ಯಕ್ತಿಯಾರು?
2. ನೊಂದವರು  ಯಾರು?
3. ಆರೋಪಿಗಳು ಯಾರು ?
4. ಸಾಕ್ಷಿಗಳು ಯಾರು ?

ಪ್ರತಿಯೊಬ್ಬರಿಗೂ - ಅವರ ಹೆಸರು, ಅಡ್ಡ ಹೆಸರು, ತಂದೆಯ ಹೆಸರು, ಜಾತಿ, ವಯಸ್ಸು, ಲಿಂಗ,  ಧರ್ಮ, ಉದ್ಯೋಗ, ಹಾಗು ಅರೋಪಿಗಳ ಹೆಸರು ಗೊತಿಲ್ಲದೆ ಇರುವಾಗ, ಅವರ ದೈಹಿಕ ವಿವರಗಳು

## 2. ಏನು?

ಘಟನೆಯ ವಿವರಗಳು

ಕೆಳಗೆ ವಿವರಿಸಿದಂತೆ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕು

## 3. ಯಾಕೆ?

ಘಟನೆ ನಡೆಯಲು ಉದ್ದೇಶ ಏನು?

ಘಟನೆಯ ಹಿನ್ನಲೆ ಹಾಗು ಈ ಹಿಂದೆ ದೌರ್ಜನ್ಯ ನಡೆದಿದ್ದರೆ ಅದರ ವಿವರ, ಇತ್ಯಾದಿಯ ಮಾಹಿತಿ. ಆಧಾರವಿಲ್ಲದ ಆರೋಪಗಳನ್ನು ನೀಡಬಾರದು.

## 4. ಹೇಗೆ?

ದೌರ್ಜನ್ಯ ನಡೆದಿದ್ದು ಹೇಗೆ?

ಯಾವ ರೀತಿ ದೌರ್ಜನ್ಯಕ್ಕೆ ಒಳಪಟ್ಟರು(ಮೌಕಿಕ/ದೈಹಿಕ), ಆಯುಧಗಳು ಉಪಯೋಗಿಸಲ್ಪಟ್ಟಲ್ಲಿ ಅದರ ವಿವರಗಳು, ವಾಹನ ಉಪಯೋಗಿಸಲ್ಪಟ್ಟಲ್ಲಿ ಅದರ ವಿವರಗಳು, ಸ್ವತ್ತು ನಾಷವಾಗಿದ್ದರೆ ಅದರ ವಿವರಗಳು, ಪ್ರತಿ ಆರೋಪಿಯ ಪಾಲ್ಗೊಳ್ಳುವಿಕೆ ಇತ್ಯಾದಿ

## 5. ಎಲ್ಲಿ?

ಘಟನೆ ಎಲ್ಲೆ ನಡೆಯಿತು?

ಘಟನೆಯ ನಡೆದ ಸ್ಥಳದ ಚಕ್ಕುಬಂದಿ, ಗ್ರಾಮ, ಕೇರಿ, ಹೋಬಳಿ, ತಾಲ್ಲೂಕು, ಜಿಲ್ಲೆ. ಸ್ಥಳ ಗುರುತಿಸಲು ಹೆಗ್ಗುರುತುಗಳ ವಿವರ ಹಾಗು ಸ್ಥಳದ ಜನಪ್ರಿಯ ಹೆಸರು , ಇವುಗಳನ್ನು ದಾಖಲಿಸಬೇಕು.

## 6. ಯಾವಾಗ?

ಘಟನೆ ಯಾವಾಗ ನಡೆಯಿತು?

ದಿನಾಂಕ, ತಿಂಗಳು, ವರ್ಷ, ಸಮಯ, ಬಗ್ಗೆ ಸ್ಪಷ್ಟವಾಗಿ ವಿವರ ನೀಡಬೇಕು. ಸ್ಪಷ್ಟ ಮಾಹಿತಿ ಇಲ್ಲದಿದ್ದಲ್ಲಿ , ಸಮಯ ಗುರುತಿಸಲು ಇತರ ವಿವರಗಳು ನೀಡಬಹುದು – ಉದಾಹರಣೆಗೆ, ಆ ದಿವಸ ಸಂತೆ ಅಥವ ಹಬ್ಬ ಯಾವುದಾದರು ನಡೆಯುತಿತ್ತು ಇತ್ಯಾದಿ


ಸಾಧ್ಯವಾದಷ್ಟು ಬಾಧಿತರು/ಅವರ ಕುಟುಂಬದವರು ಸ್ಥಳೀಯ ಠಾಣೆಗೆ ಹೋಗಿ ದೂರು ನೀಡಬೇಕು. ಆಗದಿದ್ದಲ್ಲಿ  ಘಟನೆಯನ್ನು ನೇರವಾಗಿ ನೋಡಿದತಂಹ ಕಾಳಜಿಯುಳ್ಳ ನಾಗರೀಕರೊಬ್ಬರು ದೂರನ್ನು ನೀಡಬಹುದು.

ದೂರು ನೀಡಿದ ತಕ್ಷಣ ಠಾಣಾಧಿಕಾರಿಗಳು ಎಫ್.ಐ.ಆರ್. ಅನ್ನು ದೌರ್ಜನ್ಯ ತಡೆ ಕಾಯ್ದೆ ಮತ್ತು ಭಾರತದಂಡ ಸಂಹಿತೆ ಕಾನೂನಿನ ,ಸೂಕ್ತ ಕಲಂಗಳ  ಅಡಿಯಲ್ಲಿ ಎಫ್.ಐ.ಆರ್ ದಾಖಲಿಸಬೇಕು.

ಪೊಲೀಸ್  ಅಧಿಕಾರಗಳು, ಎಫ್.ಐ.ಆರ್. ದಾಖಲು ಆದ ತಕ್ಷಣದಲ್ಲಿ ದೂರುದಾರರಿಗೆ ಅದರ ಪ್ರತಿಯನ್ನು ಉಚಿತವಾಗಿ ನೀಡಬೇಕು. ದೂರುದಾರರು ಎಫ್.ಐ.ಆರ್. ಪ್ರತಿಯನ್ನು ಕೇಳದಿದ್ದರು ಅದರ ಪ್ರತಿಯನ್ನು ನೀಡಬೇಕು.



# ಜಾತಿ ದೌರ್ಜನ್ಯ ಸಂಭವಿಸಿದಾಗ ವಿವಿಧ ಅಧಿಕಾರಿಗಳ ಜವಾಬ್ದಾರಿಗಳು





## ಪೊಲೀಸ್ (ಸರ್ಕಲ್ ಇನ್‌ಸ್‌ಪೆಕ್ಟರ್ ಅಥವ ಸಬ್ ಇನ್‌ಸ್‌ಪೆಕ್ಟರ್)

ದೌರ್ಜನ್ಯದ ದೂರು (ದೂರನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ನೀಡಿರಬಹುದು ) ಸ್ವೀಕರಿಸಿದ ಕೂಡಲೆ ಪೊಲೀಸರು (ಸರ್ಕಲ್ ಇನ್‌ಸ್‌ಪೆಕ್ಟರ್ ಅಥವ ಸಬ್ ಇನ್‌ಸ್‌ಪೆಕ್ಟರ್) ಎಫ್.ಐ.ಆರ್ ಅನ್ನು ನೋಂದಾಯಿಸಬೇಕು. ತನಿಖೆಯನ್ನು ಡೆಪ್ಯುಟಿ  ಪೊಲೀಸ್ ಸೂಪರಿಂಟೆಂಡೆಂಟ್ ದರ್ಜೆಗಿಂತ ಕಡಿಮೆ ಇಲ್ಲದ ಪೊಲೀಸ್  ಅಧಿಕಾರಿಯು ಕೈಗೊಳ್ಳಬೇಕು.

## ಜಿಲ್ಲಾ ಮ್ಯಾಜಿಸ್ಟ್ರೇಟ್/ಉಪ ವಿಭಾಗದ ಮ್ಯಾಜಿಸ್ಟ್ರೇಟ್/ಕಾರ್ಯಕಾರಿ ಮ್ಯಾಜಿಸ್ಟ್ರೇಟ್

ದೌರ್ಜನ್ಯದ  ಬಗ್ಗೆ ಮಾಹಿತಿ ಸಿಕ್ಕಿದ ಕೂಡಲೆ, ಜಿಲ್ಲಾ ಮ್ಯಾಜಿಸ್ಟ್ರೇಟ್/ಉಪ ವಿಭಾಗದ ಮ್ಯಾಜಿಸ್ಟ್ರೇಟ್/ಕಾರ್ಯಕಾರಿ ಮ್ಯಾಜಿಸ್ಟ್ರೇಟ್ ತಕ್ಷಣ ಘಟನೆ ಸ್ಥಳಕ್ಕೆ ಭೇಟಿ ನೀಡಿ, ದೌರ್ಜನ್ಯದ ಪ್ರಮಾಣದ ಬಗ್ಗೆ ತಿಳಿದಿಕೊಂಡು ಸರ್ಕಾರಕ್ಕೆ ವರದಿಯನ್ನ ಸಲ್ಲಿಸತಕ್ಕದ್ದು. ಹಾಗೆಯೆ  ಎಫ್.ಐ.ಆರ್ ನೋಂದಾಯಿಸುವಂತೆ ಕಚಿತಪಡಿಸಬೇಕು. ಸಂತ್ರಸ್ತರ  ಕುಟುಂಬಕ್ಕೆ  ಪರಿಹಾರ ದೊರಕುವಂತೆ ಕಚಿತಪಡಿಸಬೇಕು.






## ಪೊಲೀಸ್  ಸೂಪರಿಂಟೆಂಡೆಂಟ್

ದೌರ್ಜನ್ಯದ ಬಗ್ಗೆ ಮಾಹಿತಿ ಸಿಕ್ಕಿದ ಕೂಡಲೆ ಪೊಲಿಸ್ ಸೂಪರಿಂಟೆಂಡೆಂಟ್ ತಕ್ಷಣ ಘಟನೆ ಸ್ಥಳಕ್ಕೆ ಭೇಟಿ ನೀಡಿ ಎಫ್ .ಐ.ಆರ್ ದಾಖಲಿಸುವಂತೆ ಕಚಿತಪಡಿಸಬೇಕು. ಸ್ಥಳೀಯ ಪೊಲೀಸ್   ಅಧಿಕಾರಿಗಳು ಏಫ್.ಐ .ಆರ್ ದಾಖಲಿಸದೆ ಇದ್ದಲ್ಲಿ , ಎಫ್.ಐ.ಆರ್ ದಾಖಲಿಸುವಂತೆ ಆದೇಶಿಸಬೇಕು . ಹಾಗೆಯೆ ಘಟನೆ ನಡೆದ ಪ್ರದೇಶದಲ್ಲಿ ಪೊಲೀಸ್   ಬಲವನ್ನು ನಿಯೋಜಿಸತಕದ್ದು ಹಾಗು ಇತರ ನಿವಾರಣ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಪೊಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟ್

ಪೊಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟ್ ದೌರ್ಜನ್ಯಗೊಳಗಾದ ವ್ಯಕ್ತಿಗೆ ಕಿರುಕುಳ ಮತ್ತು ಬೆದರಿಕೆ ಹಾಕುವುದರಿಂದ ರಕ್ಷಣೆ ನೀಡಬೇಕು . ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ 60 ದಿನಗಳೊಳಗೆ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು.





## ವಿಶೇಶ ಸಾರ್ಜವನಿಕ ಅಭಿಯೋಜಕರು(ಎಸ್.ಪಿ.ಪಿ)

ವಿಚಾರಣೆಯಲ್ಲಿ ಸಂತ್ರಸ್ತರನ್ನು ಪ್ರತಿನಿಧಿಸುವುದಕ್ಕಾಗಿ ರಾಜ್ಯ ಸರ್ಕಾರವು ವಕೀಲರೊಬ್ಬರನ್ನು ಎಸ್.ಪಿ.ಪಿ ಆಗಿ ನೇಮಿಸುತ್ತದೆ.  ಸಂತ್ರಸ್ತರಿಗೆ ತಮ್ಮ ಆಯ್ಕೆಯ ವಕೀಲರನ್ನು ಎಸ್.ಪಿ.ಪಿ ಯಾಗಿ ನೇಮಿಸಿಕೊಳ್ಳುವ ಹಕ್ಕಿದೆ. ನ್ಯಯಾಲಯದಲ್ಲಿ ವಿಚಾರಣೆ ನಡೆಸಬೇಕಾದ ಜವಾಬ್ದಾರಿ ಎಸ್.ಪಿ.ಪಿ ಯವರದ್ದು. ಎಸ್.ಪಿ.ಪಿ ರವರು ಸಂತ್ರಸ್ತರಿಗೆ ಹಾಗು ಅವರ ಅವಲಂಬಿತರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಬೇಕು. ಹಾಗೆಯೇ ಸಂತ್ರಸ್ತರಿಗೆ ಕಾನೂನು ನೆರವು (ಲೀಗಲ್ ಏಯ್ಡ್ ) ನೀಡಬೇಕು .  ಎಸ್.ಪಿ.ಪಿ ರವರು ದೂರುದಾರರು /ಸಂತ್ರಸ್ತರು ಹಾಗು ಸಾಕ್ಷಿಗಳನ್ನು ವಿಚಾರಣೆಗೆ ಸಹ ಸಿದ್ದಪಡಿಸಬೇಕು .

https://altlawforum.org/